ಗೊತ್ತಾಗುತ್ತಿಲ್ಲ. ಆಹಾರ ನಿಗಮ ಮಾತ್ರ ಇದೆ ಎಂದು ಹೇಳುತ್ತಾರೆ. ಅಲ್ಲಿ ನೌಕರರು ಇದ್ದಾರೆ. ಸಹಕಾರ ಸಂಘಕ್ಕೆ ಉತ್ತೇಜನ ಹೇಗೆ ಕೊಡಬೇಕೆಂದು ಅವರಿಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು:– ತಾವು ಭಾಷಣವನ್ನು ಮಾಡುತ್ತಿರೋ, ಉಪಪ್ರಶ್ನೆಯನ್ನು ಕೇಳುತ್ತೀರೋ.

ಶ್ರೀ ಎಂ. ಪಿ. ವೆಂಕಟೇಶ್:– ಅವರಿಗೆ ಅರ್ಥವೇ ಆಗುತ್ತಿಲ್ಲ.

ಅಧ್ಯಕ್ಷರು:– ತಾವು ಹೋಗಿ ಮಾತನಾಡಿ.

ಶ್ರೀ ಎಂ. ಪಿ. ವೆಂಕಟೇಶ್:– ವ್ಯವಸಾಯೋತ್ಪನ್ನ ಮಾರುಕಟ್ಟೆಯಲ್ಲಿ ಹಣ ಇದೆ. ಅವರು ಉತ್ತಮವಾಗಿ ನಡೆಸುತ್ತಾರೆ ಅವರಿಗೆ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಹೆಗ್ಗಡದೇವನಕೋಟೆಯಲ್ಲಿರುವ ಸಹಕಾರ ಸಂಘದವರ ಆರ್ಥಿಕ ಪರಿಸ್ಥಿತಿ ಸರಿಯಾಗಿದೆ. ಅವರು ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತಾರೆ. ನೀವು ಅದನ್ನು ಅವರಿಗೆ ಕೊಡಿ.

ಅಧ್ಯಕ್ಷರು:– ಅವರು ಪರಿಶೀಲನೆ ಮಾಡುತ್ತಾರೆ.

ತಡೆಹಿಡಿಯಲಾದ ಪ್ರಶ್ನೆಗಳು

ಅಧ್ಯಕ್ಷರು:– ಮಾನ್ಯ ಬಸವರಾಜರಾಯರೆಡ್ಡಿಯವರ ಪ್ರಶ್ನೆ ಸಂಖ್ಯೆ 615ಕ್ಕೆ ಕಾಲಾವಕಾಶವನ್ನು ಕೋರಿದ್ದಾರೆ.

ಶ್ರೀ ಬಸವರಾಜರಾಯರೆಡ್ಡಿ:– ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ಪ್ರಶ್ನೆಯಾಗಿದೆ. ನನಗೆ ಅನ್ನಿಸುತ್ತದೆ ಸರ್ಕಾರದವರು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಸದನಕ್ಕೆ ಸರ್ಕಾರದವರು ವಂಚನೆಯನ್ನು ಮಾಡುತ್ತಿದ್ದಾರೆ. ನಾನು ಯಾವ್ಯಾವ ಮಂತ್ರಿಗಳ ಮೇಲೆ ಕೇಸ್‌ಗಳು ದಾಖಲಾಗಿದೆ, ಯಾವ್ಯಾವ ಸದಸ್ಯರುಗಳ ಮೇಲೆ ಕೇಸ್‌ಗಳು ದಾಖಲೆಯಾಗಿದೆ ಅಂತಹವರ ಬಗ್ಗೆ ಮಾಹಿತಿ ಕೊಡಿ ಅಂದರೆ, ಎಲ್ಲಾ ಮಾಹಿತಿ ಇದ್ದು ಸರ್ಕಾರ ಏತಕ್ಕೆ ಕೊಡುತ್ತಿಲ್ಲ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಸಾಂದ್ರರವರ ಬಗ್ಗೆ ಗೊತ್ತಾಗಿದೆ ಅವರ ಬಗ್ಗೆಯೂ ಉತ್ತರಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಸರ್ಕಾರ ಕೆಲವು ಸಲ ಪ್ರಶ್ನೆಗಳಿಗೆ ಉತ್ತರ ಕೊಡಲು ಸಮಯ ಕೇಳುತ್ತದೆ. ನಾವೂ ಸಹ ಉತ್ತರಕ್ಕಾಗಿ ಕಾಯಬೇಕಾಗುತ್ತದೆ. ಆದರೆ, ಈ ಪ್ರಶ್ನೆ ಮೂರನೆಯ ಬಾರಿ ಸದನದಲ್ಲಿ ಬರುತ್ತಿದೆ. ಕಳೆದ ಸಲ ಈ ಪ್ರಶ್ನೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು 'ಇದರ ಬಗ್ಗೆ ಎಲ್ಲಾ ಮಾಹಿತಿ ಬಂದಿದೆ, ಇನ್ನೂ ಸ್ವಲ್ಪ ಮಾಹಿತಿ ಸಂಗ್ರಹಿಸಬೇಕಾಗಿರುವುದರಿಂದ ಮಂದಿನ ಸಲ ಉತ್ತರ ಕೊಡುತ್ತೇವೆ ಎಂದು ಹೇಳಿದರು. ಸದನದಲ್ಲಿ ಪುನಃ ಇದೇ ಪ್ರಶ್ನೆ ಬಂದಿದ್ದು ಉತ್ತರಕ್ಕಾಗಿ ಮತ್ತೆ ಕಾಯಬೇಕೆಂದು ಹೇಳಿದ್ದಾರೆ. ಆದುದರಿಂದ, ಇದರ ಹಿನ್ನೆಲೆ ಏನೆಂದು ಗೊತ್ತಾಗುತ್ತದೆ. ಸರ್ಕಾರದಲ್ಲಿ ಒಂದು ರೀತಿಯ ಆಂತರಿಕ ಸಮಸ್ಯೆ ನಿರ್ಮಾಣವಾಗಿದೆ, ಭಿನ್ನಮತೀಯ ಚಟುವಟಿಕೆಗಳು ಹೆಚ್ಚಾಗುತ್ತಿದೆ, ಈಗಾಗಲೇ ಗಲಾಟೆ ಶುರುವಾಗಿದೆ, ಹಾಗಾಗಿ ಎಂ.ಎಲ್.ಎ.ಗಳು ಮತ್ತು ಮಂತ್ರಿಗಳು ಎಕ್ಸ್‌ಪೋಸ್ ಆಗಬಹುದೆನ್ನುವ ಭಯದಿಂದ ಉತ್ತರ ಕೊಡುತ್ತಿಲ್ಲ. ಇಲ್ಲದಿದ್ದರೆ ಧೈರ್ಯವಾಗಿ 'ನಮ್ಮ ಎಂ.ಎಲ್.ಎ., ಮಂತ್ರಿಗಳು ಎಕ್ಸ್‌ಪೋಸ್ ಆಗುತ್ತಾರೆ, ಈಗಾಗಲೇ ಭಿನ್ನಮತೀಯ ಚಟುವಟಿಕೆಗಳು ಹೆಚ್ಚಾಗಿವೆ' ಎಂದು ಸ್ಪಷ್ಟವಾಗಿ ಹೇಳಿ.' 'ಇದು ಬಹಳ ಸೂಕ್ಷ್ಮವಾದ ಪ್ರಶ್ನೆ, ಇದಕ್ಕೆ ಉತ್ತರ ಕೊಟ್ಟರೆ ಸರ್ಕಾರಕ್ಕೆ ಕಿರಿಕಿರಿಯಾಗುತ್ತದೆ. ಆದುದರಿಂದ, ಉತ್ತರ ಕೊಡುವುದಿಲ್ಲ' ಎಂದು ಹೇಳಿ. ನೀವು ಈ ಅಧಿವೇಶನವನ್ನು ಇನ್ನೆಷ್ಟು ದಿವಸಗಳ ಕಾಲ ನಡೆಸುತ್ತೀರಿ ? ನಾನು ಸನ್ಮಾನ್ಯ

ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳಿಗೆ ಸ್ಪಷ್ಟವಾಗಿ ಕೇಳುತ್ತಿದ್ದೇನೆ: ನೀವು ಈ ಪ್ರಶ್ನೆಗೆ ಉತ್ತರ ಕೊಡುತ್ತೀರೋ ಇಲ್ಲವೊ ? ಉತ್ತರ ಕೊಟ್ಟರೆ ಯಾವಾಗ ಕೊಡುತ್ತೀರಿ ? ಕಳೆದ ಬಾರಿ ಮುಖ್ಯಮಂತ್ರಿಗಳು 'ಮುಂದಿನ ಸಲ ಉತ್ತರ ಕೊಡುತ್ತೇವೆ' ಎಂದು ಹೇಳಿದರು. ನಿಮಗೆ ಆ ಮುಂದಿನ ಸಲ ಬರುವುದು ಯಾವಾಗ ?

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ತಾವು ಮುಖ್ಯವಾಗಿ ವಿರೋಧ ಪಕ್ಷದಲ್ಲಿರುವ ಸದಸ್ಯರುಗಳ ರಕ್ಷಣೆಗೆ ಬರಬೇಕಾಗುತ್ತದೆ. ನಮಗೆ ತಾವು ಈಗ ಮಾತನಾಡುವುದಕ್ಕೆ ಅವಕಾಶ ಕೊಡದೆ ಹೋದರೂ ಪರವಾಗಿಲ್ಲ, ಆದರೆ, ದಯವಿಟ್ಟು ನಮ್ಮ ಮಾತನ್ನು ಕೇಳಬೇಕು. ನಾನು ಈ ಸಂದರ್ಭದಲ್ಲಿ ತರತಕ್ಕಂಥ ವಿಷಯ ಬಹಳ ಔಚಿತ್ಯವಾದುದು. ಸದನದ ಸಮಯವನ್ನು ಹಾಳುಮಾಡಬೇಕೆಂಬ ಉದ್ದೇಶ ನನಗಿಲ್ಲ. ವಿಷಯವೇನೆಂದರೆ, ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಒಂದು ಖಾಸಗಿ ಮೆಡಿಕಲ್ ಕಾಲೇಜಿಗೆ 40 ಜನ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತೆಗೆದುಕೊಳ್ಳುವ ಬಗ್ಗೆ ಅಡ್ಮಿಷನ್ ಅಪ್ರೂವ್ ಆಗಿರಲಿಲ್ಲ. ಆದರೆ ಮುಖ್ಯಮಂತ್ರಿಗಳು ಪರೀಕ್ಷೆಯ ಹಿಂದಿನ ದಿವಸ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್‌ಗೆ ದೂರವಾಣಿ ಕರೆ ನೂಡಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾನು ಈ ಪ್ರಶ್ನೆ ಎತ್ತುವುದಿಲ್ಲ. ಮೂರು ಸಾರಿ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದರೂ ಇದುವರೆವಿಗೂ ಉತ್ತರ ಬಂದಿಲ್ಲವೆಂದರೆ ಏನರ್ಥ ? ಸರ್ಕಾರಕ್ಕೆ ಏನು ಇದರಿಂದ ಕಿರಿಕಿರಿಯಾಗಿದೆ ? ಇದು ಬಹಳ ಸೂಕ್ಷ್ಮವಾದಂಥ ವಿಚಾರ. ಈಗ ನಾವು ನಮ್ಮ ಕ್ಷೇತ್ರದ ಬಗ್ಗೆ ಯಾವುದೋ ಅಂಕಿ–ಅಂಶಗಳನ್ನು ಪಡೆದುಕೊಳ್ಳಲು ಸದನದಲ್ಲಿ ಪ್ರಶ್ನೆ ಕೇಳುವುದಿಲ್ಲ. ಜನರು ಇವತ್ತು ನಮ್ಮಿಂದ ಏನು ಅಪೇಕ್ಷೆ ಮಾಡುತ್ತಿದ್ದಾರೆ, ಎಂದರೆ–

'ಇವೊತ್ತು ವಿರೋಧಪಕ್ಷದವರು ಸರ್ಕಾರ ಮಾಡತಕ್ಕಂಥ ಎಲ್ಲಾ ಅಕೃತ್ಯಗಳ ಜೊತೆ ಶಾಮೀಲಾಗಿದ್ದಾರೆ' ಎಂದು. ನಾವು ಇರತಕ್ಕಂಥಾದ್ದು ಸರ್ಕಾರ ಮಾಡತಕ್ಕಂಥ ತಪ್ಪನ್ನು ಬಯಲಿಗೆಳೆಯುವುದಕ್ಕೆ, ಈಗ ನಾನು ಪ್ರಸ್ತಾಪ ಮಾಡುತ್ತಿರುವ ವಿಚಾರವೆಂದರೆ, ಐ.ಎಂ.ಸಿ. ಕಡೆಯಿಂದ 15 ದಿವಸಗಳ ಸಮಯ ತೆಗೆದುಕೊಂಡು ಅಡ್ಮಿಷನ್ ಅಪ್ರೂವ್ ಆಗಿದೆಯೆಂದು ಹೇಳುತ್ತಾರೆ. ಹಾಗಾದರೆ, ನಾವು ಇಲ್ಲಿ ಏತಕ್ಕೋಸ್ಕರ ಪ್ರಶ್ನೆ ಕೇಳಬೇಕು ? ಪ್ರಶ್ನೋತ್ತರ ಸಮಯವಾದರೂ ಏಕಿರಬೇಕು ? ಸದನಕ್ಕೆ ಮಂತ್ರಿಗಳು ಬರುವುದಿಲ್ಲ, ತಮ್ಮ ಏಚ್ಚರಿಕೆ ಸರ್ಕಾರವನ್ನು ತಟ್ಟುವುದಿಲ್ಲ. ಆದುದರಿಂದ, ಮಾನ್ಯ ಅಧ್ಯಕ್ಷರು ನಮ್ಮಗಳ ರಕ್ಷಣೆಗೆ ಬರಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಶ್ರೀ ಬಸವರಾಜರಾಯರೆಡ್ಡಿ:– ಮಾನ್ಯ ಅಧ್ಯಕ್ಷರೆ, ನಾನು ಹಿಂದೆ ಸದನದಲ್ಲಿ ಈ ಪ್ರಶ್ನೆ ಕೇಳಿದಾಗ 'ಈಗ ಉತ್ತರಗಳಿಲ್ಲವೂ ತಯಾರಾಗಿವೆ, 3–4 ದಿವಸಗಳಲ್ಲಿ ಕೊಡುತ್ತೇನೆ' ಎಂದು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಬೇಕಾದರೆ ಆವರೇನು ಹೇಳಿದ್ದಾರೆಂಬುದರ ಬಗ್ಗೆ ಕಡತ ತೆಗೆಸಿ. ಈಗ 16 ದಿವಸಗಳಾದುವು, ಮತ್ತೆ 15 ದಿವಸಗಳ ಸಮಯ ನೀವು ಕೇಳುತ್ತಿದ್ದೀರಿ. ಇದಕ್ಕೆ ಉತ್ತರ ಕೊಡುವಂಥವರು ಮಾನ್ಯ ಮುಖ್ಯಮಂತ್ರಿಗಳು. ಅವರು ಈಗ ಸದನದಲ್ಲಿಲ್ಲ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ಕರೆಯಿಸಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬಸವರಾಜರಾಯರೆಡ್ಡಿಯವರಿಗೆ ನೀವು ತಾರೀಖು ಪಾಸಿಟಿವ್ ಆಗಿ ಉತ್ತರಕೊಡುತ್ತೇವೆ. ಎರಡನೆಯದಾಗಿ, my appeal to the hon. members through you Sir, ಪ್ರಶ್ನೆ ಕೇಳುವಾಗ, ಪ್ರಶ್ನೋತ್ತರ ಕಾಲವಿರುವುದು ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆ. ಆದರೆ, ಆದನ್ನೇ ನೀವು ಅಪ್ರತ್ಯಕ್ಷವಾಗಿ ಟೀಕೆಯ ಒಂದು ಆಯುಧವನ್ನಾಗಿ ಮಾಡಿಕೊಂಡು ಕೇಳುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:– ಇನ್ನು ಸರ್ಕಾರಕ್ಕೆ ನೀನು ಮಂಗಳಾರತಿ ಎತ್ತಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರು ಸರ್ಕಾರವೆಂದರೆ ದೇವರು, ನಾವು ಬಂದ ತಕ್ಷಣ ಅವರಿಗೆ ಮಂಗಳಾರತಿ ಎತ್ತಬೇಕು ಎಂದು ತಿಳಿದುಕೊಂಡಿದ್ದಾರೆ, ಆ ರೀತಿ ಭಾವನೆ ತಮ್ಮಲ್ಲಿ ಇದ್ದರೆ ಅದು ಸರಿಯಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ನಾನಾದರೂ ನಿಮ್ಮ ಸ್ಥಾನದಲ್ಲಿದ್ದರೆ ಮೊದಲು ಮಾಹಿತಿಯನ್ನು ಕಲೆಕ್ಟ್ ಮಾಡಿಕೊಂಡು ಅದನ್ನು ಉಪಯೋಗ ಮಾಡಿಕೊಂಡು ಸರ್ಕಾರದ ಮೇಲೆ ಅಟ್ಯಾಕ್ ಮಾಡುತ್ತಿದ್ದೆ. ಆದ್ದರಿಂದ ಮಾಹಿತಿಯನ್ನು ತೆಗೆದುಕೊಳ್ಳುವಾಗಲೇ ಜಗಳವಾಡುವುದು ಬೇಡ, ಅಷ್ಟೆ.

ಶ್ರೀ ಬಿ. ಹೆಚ್. ಬನ್ನಿಕೋಡ್:– ಮಾಹಿತಿಯನ್ನು ಕೊಡಲು ತಾವು ಸಿದ್ದರಿಲ್ಲ.

(ಗೊಂದಲ)

ಕುಖ್ಯಾತ ದಂತಚೋರ ವೀರಪ್ಪನ್ ಸೆರೆ.

25 (191): ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತರಿಸುವರೇ ?

ಅ. ಕುಖ್ಯಾತ ದಂತಚೋರ ಹಾಗೂ ಆನೆ ಹಂತಕ ವೀರಪ್ಪನ್‌ನನ್ನು ಹಿಡಿಯುವ ಕಾರ್ಯದಲ್ಲಿ ರಾಜ್ಯ ಸರ್ಕಾರವು ಈವರೆವಿಗೆ ಯಾವ ಪ್ರಗತಿಯನ್ನು ಸಾಧಿಸಿದೆ ?

ಆ. ಈ ವಿಷಯದ ಬಗ್ಗೆ ತಮಿಳುನಾಡು ಸರ್ಕಾರವು ಚುರುಕಾಗಿ ಕೆಲಸ ಮಾಡುತ್ತಿದ್ದು, ರಾಜ್ಯ ಸರ್ಕಾರವು ಈ ಬಗ್ಗೆ ಆಸಕ್ತಿಯನ್ನು ಕಡಿಮೆ ಮಾಡಿರುವುದು ನಿಜವೇ ?

ಇ. ಹಾಗಿದ್ದಲ್ಲಿ, ಹಂತಕನನ್ನು ಪತ್ತೆ ಮಾಡಲು ಕೈಗೊಂಡಿರುವ ಕ್ರಮಗಳೇನು ?

ಈ. ಈ ಕಾರ್ಯಕ್ಕೆ ನೆರವಾಗಲು ಅರಣ್ಯ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. 1990 ಜನವರಿ: ಫೆಬ್ರವರಿಯಲ್ಲಿ ಕರ್ನಾಟಕ–ತಮಿಳುನಾಡು ಸರ್ಕಾರಗಳು ಅರಣ್ಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆಯಲ್ಲಿ ವೀರಪ್ಪನ್ ಮತ್ತು ಆತನ ತಂಡವನ್ನು ಹಿಡಿಯುವ ಪ್ರಯತ್ನವನ್ನು ಪ್ರಾರಂಭಿಸಿದರು. ಇದರ ಪರಿಣಾಮವಾಗಿ ವೀರಪ್ಪನ್ ಸಂಗ್ರಹಿಸಿದ್ದ ಲಕ್ಷಾಂತರ ರೂಪಾಯಿಗಳ ಬೆಲೆಯ ಗಂಧದ ಮರವನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. 18–4–90ರಂದು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯ ಅಧಿಕಾರಿಯ ನೇತೃತ್ವದಲ್ಲಿ ಪೊಲೀಸ್ ಮತ್ತು ಅರಣ್ಯ ಅಧಿಕಾರಿಗಳನ್ನು ಹೊಂದಿದ ಟಾಸ್ಕ್ ಫೋರ್ಸನ್ನು ಕರ್ನಾಟಕ ಸರ್ಕಾರವು ರಚಿಸಿತು. ಆಗಿನಿಂದ ವೀರಪ್ಪನ್ ಮತ್ತು ಆತನ ತಂಡವನ್ನು ಹಿಡಿಯಲು ತೀವ್ರ ಪ್ರಯತ್ನವನ್ನು ಮಾಡಲಾಗುತ್ತಿದೆ. ಅರಣ್ಯದಲ್ಲಿ ತೀವ್ರ ಗಸ್ತು ಮತ್ತು ಹುಡುಕಾಟವನ್ನು ನಿರಂತರವಾಗಿ ಮಾಡಲಾಗುತ್ತಿದೆ. ಈ ಪ್ರಯತ್ನದಿಂದ ವೀರಪ್ಪನ್ ತಂಡದ ಸದಸ್ಯರು, ಹಿತೈಷಿಗಳು ಮತ್ತು ಅನೇಕ ಅಪರಾಧಗಳಲ್ಲಿ ತೊಡಗಿದ 69 ಜನರನ್ನು ಈಗಾಗಲೇ ಬಂಧಿಸಲಾಗಿದೆ. ಆತನ ತಂಡದ 5 ಮಂದಿ ಘರ್ಷಣೆಯಲ್ಲಿ ಮರಣ ಹೊಂದಿದ್ದಾರೆ.

ಆ. ವೀರಪ್ಪನ್ ಮತ್ತು ಆತನ ತಂಡದ ಸದಸ್ಯರ ಬಂಧನಕ್ಕಾಗಿ ಕರ್ನಾಟಕ ಮತ್ತು ತಮಿಳುನಾಡು